**ಮೆ॥ ಜ್ಯುವೆಲ್ ರಾಕ್ ಗ್ರಾನೈಟ್ಸ್ ರವರು ಅಲಂಕಾರಿಕ ಶಿಲೆ ಗ್ರೇ ಗ್ರಾನೈಟ್ ಕಲ್ಲು ಗಣಿಗಾರಿಕೆ ಮಾಡಲು ಸರ್ವೆ ನಂ. 116 & 77, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು 20.00 ಎಕರೆ (8.093 ಹೆಕ್ಟೇರ್) ಪ್ರದೇಶದಲ್ಲಿ ವರ್ಷಕ್ಕೆ 1,13,775 ಟನ್‌ಗಳಷ್ಟು ಅಲಂಕಾರಿಕ ಶಿಲೆ (ಗ್ರೇ ಗ್ರಾನೈಟ್) ಕಲ್ಲು ಗಣಿಗಾರಿಕೆಯನ್ನು ಸ್ಥಾಪನೆ ಮಾಡುವ ಸಲುವಾಗಿ ದಿನಾಂಕ: 24/08/2022 ರಂದು ಬೆಳಿಗ್ಗೆ 11.00 ಕ್ಕೆ ಮಾನ್ಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಸಭೆಯ ನಡಾವಳಿಗಳು.**

| | |
|---|---|
| ಸ್ಥಳ | ಸರ್ವೆ ನಂ. 116 & 77, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ |
| ಸಮಯ | ಬೆಳಿಗ್ಗೆ 11.00 ಘಂಟೆಗೆ |

| ಸಾರ್ವಜನಿಕ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು | |
|---|---|
| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ |
| 1. | ಶ್ರೀ. ಹೆಚ್. ಅಮರೇಶ್,<br>ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ<br>ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರು |
| 2. | ಶ್ರೀ. ಎಸ್. ಶಿವಪ್ಪನಾಯಕ್,<br>ಹಿರಿಯ ಪರಿಸರ ಅಧಿಕಾರಿಗಳು, ಬೆಂಗಳೂರು ಪೂರ್ವ ವಲಯ,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,<br>ಬೆಂಗಳೂರು |
| 3. | ಶ್ರೀ. ಟಿ.ಎಮ್.ಸಿದ್ದೇಶ್ವರ ಬಾಬು,<br>ಪರಿಸರ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಪ್ರಾದೇಶಿಕ ಕಛೇರಿ, ಚಿಕ್ಕಬಳ್ಳಾಪುರ |
| 4. | ಶ್ರೀ. ರವಿ ವೈ<br>ತಹಸೀಲ್ದಾರರು, ಬಾಗೇಪಲ್ಲಿ (ತಾ),<br>ಚಿಕ್ಕಬಳ್ಳಾಪುರ ಜಿಲ್ಲೆ |
| 5. | ಶ್ರೀ. ಕೃಷ್ಣಮೂರ್ತಿ ಬಿ.ಎನ್.<br>ಭೂ ವಿಜ್ಞಾನಿ ಅಧಿಕಾರಿಗಳು,<br>ಗಣಿ ಮತ್ತು ಭೂ ವಿಜ್ಞಾನ ಇಲಾಖೆ,<br>ಚಿಕ್ಕಬಳ್ಳಾಪುರ ಜಿಲ್ಲೆ |

| ಗಣಿ ಉದ್ದಿಮೆದಾರರು ಹಾಗೂ ಪರವಾಗಿ ಹಾಜರಿದ್ದವರು | |
|---|---|
| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ |
| 1. | ಶ್ರೀ. ಹೆಚ್. ಎ. ಇಕ್ಬಾಲ್ ಹುಸೇನ್<br>ಮಾಲೀಕರು<br>ಮೆ॥ ಜ್ಯುವೆಲ್ ರಾಕ್ ಗ್ರಾನೈಟ್ಸ್<br>ಸರ್ವೆ ನಂ. 116 & 77,<br>ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ |
| 2. | ಶ್ರೀ. ಅಶ್ವಥ ನಾರಾಯಣ<br>ಯೋಜನಾ ಸಲಹೆಗಾರರು<br>ಎನ್ವಿಪ್ರೊ ಸಲ್ಯೂಷನ್ಸ್ ಪ್ರೈ.ಲಿ.,<br>ಬೆಂಗಳೂರು. |

ಮೆ॥ ಜ್ಯುವೆಲ್ ರಾಕ್ ಗ್ರಾನೈಟ್ಸ್ ಇವರು ಸರ್ವೆ ನಂ. 116 & 77, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾದ ಪರಿಸರ ಸಾರ್ವಜನಿಕ ಸಭೆಗೆ ಸುತ್ತಮುತ್ತಲಿನ ಹಳ್ಳಿಗಳ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಪರಿಸರವಾದಿಗಳು, ಪತ್ರಕರ್ತರು, ಸಾರ್ವಜನಿಕರು, ಸರ್ಕಾರೇತರ ಸಂಸ್ಥೆಗಳ ಸದಸ್ಯರುಗಳು, ವ್ಯವಸಾಯದಾರರು/ರೈತರು ಇವರುಗಳು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡಿದ್ದರು. ಹಾಜರಾತಿಯನ್ನು **ಅನುಬಂಧ –1** ರಲ್ಲಿ ಲಗತ್ತಿಸಿದೆ.

**ಪೀಠಿಕೆ:**

ಮೆ॥ ಜ್ಯುವೆಲ್ ರಾಕ್ ಗ್ರಾನೈಟ್ಸ್ ಇವರು ಸರ್ವೆ ನಂ. 116 & 77, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆಯ ಒಟ್ಟು 20.00 ಎಕರೆ (8.093 ಹೆಕ್ಟೇರ್) ಪ್ರದೇಶದಲ್ಲಿ ವರ್ಷಕ್ಕೆ 1,13,775 ಟನ್‌ಗಳಷ್ಟು ಅಲಂಕಾರಿಕ ಶಿಲೆ (ಗ್ರೇ ಗ್ರಾನೈಟ್) ಕಲ್ಲು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿ ಪರಿಸರ ಪರಿಣಾಮದ ಮೌಲ್ಯಾಂಕನ ಅಧ್ಯಯನದ ಅಧಿಸೂಚನೆ, 2006 (ದಿನಾಂಕ: 14.09.2006, ತಿದ್ದುಪಡಿ ದಿನಾಂಕ 01.12.2009ನ್ನು ಜಾರಿಗೊಳಿಸಿದ್ದು, ಇದರ ಅನ್ವಯ ಸದರಿಯವರ ಉದ್ದೇಶಿತ ಯೋಜನೆಯು ಬಿ 1 ರಲ್ಲಿ ಒಳಪಡುವುದರಿಂದ ಉದ್ದೇಶಿತ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ SEIAA 36 MIN 2021, ದಿನಾಂಕ: 14/07/2021 ಅಂತಿಮಗೊಳಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ಯೋಜನಾ ಸಲಹೆಗಾರರಿಗೆ ತಿಳಿಸಿರುತ್ತಾರೆ. ಅದರಂತೆ ಷರತ್ತು ಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ॥ ಜ್ಯುವೆಲ್ ರಾಕ್ ಗ್ರಾನೈಟ್ಸ್ ಇವರು ತಯಾರಿಸಿದ ಪರಿಸರ ಪರಿಣಾಮಗಳ ಮೌಲ್ಯಾಂಕನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ದಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡುವಂತೆ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ದಿನಾಂಕ: 05/03/2022 ರಂದು ಮನವಿ ಸಲ್ಲಿಸಿರುತ್ತಾರೆ.

ಉದ್ದಿಮೆದಾರರ ಮನವಿ ಹಾಗೂ ಮಂಡಳಿಯ ಪತ್ರದನ್ವಯ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ದಿನಾಂಕ: 18/05/2022 ರಂದು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ, ಸ್ಥಳ ಹಾಗೂ ಸಮಯವನ್ನು ನೀಡಲು ಕೋರಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 24/08/2022 ರಂದು ಬೆಳಿಗ್ಗೆ 11.00 ಗಂಟೆಗೆ ಯೋಜನಾ ಸ್ಥಳವಾದ ಸರ್ವೆ ನಂ. 116 & 77, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ನೀಡಿರುತ್ತಾರೆ. ಸದರಿ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ರಾಜ್ಯದ ಪ್ರಮುಖ ದಿನ ಪತ್ರಿಕೆಗಳಾದ **ದಿ ಟೈಮ್ಸ್ ಆಫ್ ಇಂಡಿಯ** ಹಾಗೂ **ಹೊಸ ದಿಗಂತ** ದಿನಪತ್ರಿಕೆಗಳಲ್ಲಿ ದಿನಾಂಕ: 24/07/2022 ರಂದು ಪ್ರಕಟಣೆ ನೀಡಿ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗಾಗಿ ಸಲ್ಲಿಸಲು ಕೋರಿರುತ್ತದೆ. ಅಲ್ಲದೆ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಮುಖ ಸ್ಥಳೀಯ ದಿನಪತ್ರಿಕೆಗಳಾದ ಕಲಾಬಂಧು ಮತ್ತು ಬಯಲು ಸಿರಿ ಪತ್ರಿಕೆಯಲ್ಲಿ ದಿನಾಂಕ : 02/08/2022 ರಂದು ನಂದಿ ವಿಜಯ ಪತ್ರಿಕೆಯಲ್ಲಿ ದಿನಾಂಕ : 03/08/2022 ರಂದು ಹಾಗೂ ವಿಜಯವಾಣಿ ಪತ್ರಿಕೆಯಲ್ಲಿ ದಿನಾಂಕ: 04/08/2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ ಮತ್ತು ಯೋಜನೆಗೆ ಸಂಬಂಧಿಸಿದ ಪರಿಸರ ಪರಿಣಾಮಗಳ ಮೌಲ್ಯಾಂಕನ ಮತ್ತು ಕಾರ್ಯಕಾರಿ ಸಾರಾಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

1. ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆ,
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ.
3. ಹಿರಿಯ ಪರಿಸರ ಅಧಿಕಾರಿಗಳು, ಬೆಂಗಳೂರು ಪೂರ್ವ ವಲಯ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನಿಸರ್ಗ ಭವನ, ಬೆಂಗಳೂರು.
4. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಜಿಲ್ಲೆ.

5. ಹಿರಿಯ ಭೂ–ವಿಜ್ಞಾನಿಗಳು, ಗಣಿ ಮತ್ತು ಭೂ–ವಿಜ್ಞಾನ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
6. ತಹಸೀಲ್ದಾರರು, ತಾಲ್ಲೂಕು ಕಛೇರಿ, ಬಾಗೇಪಲ್ಲಿ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ
7. ಮುಖ್ಯಾಧಿಕಾರಿಗಳು, ಪುರಸಭೆ – ಬಾಗೇಪಲ್ಲಿ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ.
8. ಕಾರ್ಯದರ್ಶಿಗಳು, ಗ್ರಾಮ ಪಂಚಾಯ್ತಿ ಕಛೇರಿ, ಗೊರ್ತಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ.
9. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ – ಚಿಕ್ಕಬಳ್ಳಾಪುರ.
10. ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಮಹಡಿ, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560 001.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ಯೋಜನೆಯ ಸ್ಥಾಪನೆ ಹಾಗೂ ಸಾರ್ವಜನಿಕ ಆಲಿಕೆ ಸಭೆ ನಡೆಯುವ ಕುರಿತು ಅರಿವು ಮೂಡಿಸುವ ಸಲುವಾಗಿ ದಿನಾಂಕ 18/08/2022 ರಂದು ಧ್ವನಿವರ್ಧಕ ವ್ಯವಸ್ಥೆ ಹಾಗೂ ಕರ ಪತ್ರಗಳನ್ನು ವಿತರಣೆ ಮಾಡುವ ಮೂಲಕ ಪ್ರಚಾರವನ್ನು ಮಾಡಲಾಗಿರುತ್ತದೆ. ಈ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಗಳನ್ನು **ಅನುಬಂಧ–2** ರಲ್ಲಿ ಲಗತ್ತಿಸಿದೆ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ ವಿಧಾನಗಳನ್ನು ಕ್ರಮ ಬದ್ಧವಾಗಿ ನಿಯಾಮಾನುಸಾರ ಪಾಲಿಸಿ ದಿನಾಂಕ : 24/08/2022 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳವಾದ ಸರ್ವೆ ನಂ. 116 & 77, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲಾಯಿತು.

**ಸಾರ್ವಜನಿಕ ಸಭೆಯ ನಡಾವಳಿಗಳು :**

ಶ್ರೀ ಅಮರೇಶ್, ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಮಾನ್ಯ ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಪರಿಸರ ಸಾರ್ವಜನಿಕ ಸಭೆಯ ಅಧ್ಯಕತೆಯನ್ನು ವಹಿಸಿದ್ದರು. ಅಪರ ಜಿಲ್ಲಾಧಿಕಾರಿಗಳು ಸದರಿ ಉದ್ದೇಶಿತ ಪ್ರದೇಶದ ಸ್ಥಳವನ್ನು ಸಭೆಗೆ ಹಾಜರಾಗಿದ್ದ ಬಾಗೇಪಲ್ಲಿ ತಾಲ್ಲೂಕಿನ ತಹಸೀಲ್ದಾರ್ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳೊಂದಿಗೆ ಪರಿವೀಕ್ಷಿಸಿದರು ಹಾಗೂ ಉದ್ದೇಶಿತ ಸ್ಥಳದ ನಕ್ಷೆಯನ್ನು ವೀಕ್ಷಿಸಿದರು.

ಶ್ರೀ. ಟಿ.ಎಮ್.ಸಿದ್ದೇಶ್ವರ ಬಾಬು, ಪರಿಸರ ಅಧಿಕಾರಿಗಳು, ಚಿಕ್ಕಬಳ್ಳಾಪುರ ಇವರು ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಚಿಕ್ಕಬಳ್ಳಾಪುರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಅಮರೇಶ್,

ಇವರನ್ನು ಸ್ವಾಗತಿಸಿದರು, ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ಶ್ರೀ. ಎಸ್. ಶಿವಪ್ಪ ನಾಯಕ್, ವಲಯ ಹಿರಿಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಪೂರ್ವ, ಬೆಂಗಳೂರು ಇವರನ್ನು ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಯ ಜಿಲ್ಲೆಯ ಹಾಗೂ ತಾಲ್ಲೂಕಿನ ಅಧಿಕಾರಿಗಳನ್ನು, ಯೋಜನೆಯ ಪ್ರತಿನಿಧಿಗಳನ್ನು, ಸಾರ್ವಜನಿಕರನ್ನು, ಚಿಕ್ಕಬಳ್ಳಾಪುರ ಜಿಲ್ಲೆಯ ಬೇರೆ ಬೇರೆ ಪ್ರದೇಶದ ಪರಿಸರವಾದಿಗಳು, ಪ್ರತಿನಿಧಿಗಳು, ರೈತ ಬಾಂಧವರನ್ನು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ಹಾಗೂ ಎಲ್ಲಾ ಮಾಧ್ಯಮ ಮಿತ್ರವರ್ಗದವರನ್ನು ಸ್ವಾಗತಿಸಿದರು. ಸದರಿ ಪ್ರಸ್ತಾಪಿತ ಯೋಜನೆಯು ಪರಿಸರ ಆಘಾತ ಅಧಿಸೂಚನೆ 2006 ರ ಅಡಿಯಲ್ಲಿ ಬರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಬೇಕಾಗಿರುವ ಕುರಿತು ನೆರೆದಿದ್ದ ಸಾರ್ವಜನಿಕರಿಗೆ ವಿವರಿಸಿದರು.

ಸಾರ್ವಜನಿಕ ಆಲಿಕೆ ಸಭೆಯಲ್ಲಿ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ಲಿಖಿತವಾಗಿ ಅಥವಾ ಮೌಖಿಕವಾಗಿ ವ್ಯಕ್ತಪಡಿಸಬಹುದು ಹಾಗೂ ಇದನ್ನು ವೀಡಿಯೋಗ್ರಾಫ್ ಮಾಡಲಾಗುತ್ತದೆ ಎಂದು ತಿಳಿಸಿದರು. ಪ್ರಸ್ತಾವಿತ ಯೋಜನೆಯ ತಾಂತ್ರಿಕ ವಿವರಗಳನ್ನು ಪ್ರಸ್ತುತಪಡಿಸಲು ಗಣಿ ಉದ್ದಿಮೆದಾರರ ಸಲಹೆಗಾರರಿಗೆ ತಿಳಿಸಿದರು. ಅದರನ್ವಯ ಯೋಜನೆಯ ಉದ್ದೇಶ, ಯೋಜನೆಯ ಹಿನ್ನೆಲೆ, ಕ್ಲಸ್ಟರ್ ಪತ್ರ, ಕ್ಲಸ್ಟರ್ ಸ್ಕೆಚ್, ಯೋಜನಾ ವಿವರಗಳು, ಭೂಬಳಕೆಯ ಯೋಜನೆ, ಯೋಜನೆಯ ವಿವರಗಳು, ಯೋಜನೆಯ ಸ್ಥಳ ಮತ್ತು ತಲುಪುವಿಕೆ, ಪರಿಸರದ ಸೂಕ್ಷ್ಮತೆ, ಉದ್ಯೋಗ ಸಾಧ್ಯತೆ, ಹವಾಮಾನದ ವಿವರಗಳು, ಸುತ್ತಳತೆಯ ಭೂಬಳಕೆ, ಮಣ್ಣಿನ ಗುಣಮಟ್ಟ, ಸುತ್ತುವರಿದ ಗಾಳಿಯ ಗುಣಮಟ್ಟದ ವಿವರಗಳು, ಅಂತರ್ಜಲದ ಗುಣಮಟ್ಟದ ವಿವರಗಳು, ಶಬ್ದದ ನಿರ್ವಹಣೆಯ ದತ್ತಾಂಶ, ಸಸ್ಯ ಮತ್ತು ಪ್ರಾಣಿಗಳ ವಿವರಗಳು, ಸಾಮಾಜಿಕ – ಆರ್ಥಿಕ ಪರಿಸರ, ನಿರೀಕ್ಷಿತ ಪರಿಣಾಮಗಳು, ತಗ್ಗಿಸುವಿಕೆಯ ಕ್ರಮಗಳು, ಪರಿಸರ ಮೇಲ್ವಿಚಾರಣೆ ಕಾರ್ಯಕ್ರಮ, ಹಸಿರು ಪಟ್ಟಿ ಅಭಿವೃದ್ಧಿ ಯೋಜನೆ, ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ, ಕಾರ್ಪೋರೇಟ್ ಪರಿಸರ ಜವಾಬ್ದಾರಿ, ಯೋಜನೆಯ ಫಲಶ್ರುತಿ, ಪರಿಸರ ನಿರ್ವಹಣಾ ಯೋಜನೆ, ಪರಿಸರ ನಿರ್ವಹಣಾ ಸಾರಾಂಶ ಕುರಿತು ಸಂಕ್ಷಿಪ್ತವಾದ ರೀತಿಯಲ್ಲಿ ಪವರ್ ಪಾಯಿಂಟ್ ಮುಖೇನ ವಿವರಿಸಿದರು **(ಅನುಬಂಧ –03 ರಲ್ಲಿ ಲಗತ್ತಿಸಿದೆ)**.

ಮುಂದುವರೆದು, ಪರಿಸರ ಅಧಿಕಾರಿಗಳು ಸದರಿ ಉದ್ದೇಶಿತ ಯೋಜನೆಯ ಕುರಿತು ತಮ್ಮ ಅಹವಾಲುಗಳು, ಅಭಿಪ್ರಾಯಗಳು, ಆಕ್ಷೇಪಣೆಗಳನ್ನು ಲಿಖಿತವಾಗಿ ಸಲ್ಲಿಸಬಹುದೆಂದು ಮತ್ತೊಮ್ಮೆ ಸಾರ್ವಜನಿಕರಿಗೆ ತಿಳಿಸಿದರು. ಸಾರ್ವಜನಿಕರು ಮೌಖಿಕವಾಗಿ ತಿಳಿಸುವ ಹಾಗೂ ಲಿಖಿತವಾಗಿ ಸಲ್ಲಿಸುವ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ನಡವಳಿಯಲ್ಲಿ ದಾಖಲಿಸಿ ಅಪರ ಜಿಲ್ಲಾಧಿಕಾರಿಗಳಿಂದ ಅನುಮೋದಿಸಿ ಸಹಿ ಮಾಡಲಾದ ಸಾರ್ವಜನಿಕ ಸಭೆ ನಡವಳಿಗಳನ್ನು, ಛಾಯಚಿತ್ರ ಹಾಗೂ ವೀಡಿಯೋ ದಾಖಲಾತಿಗಳೊಂದಿಗೆ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರಕ್ಕೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಅಭಿಪ್ರಾಯ/ಅನಿಸಿಕೆ/ಸಲಹೆ/ಕಳಕಳಿ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ. ಜಿ.ಎಸ್. ನರಸಿಂಹಪ್ಪ, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ.**

ಸದರಿಯವರು ಕಾರ್ಯಕ್ರಮಕ್ಕೆ ಆಗಮಿಸಿದ ಸರ್ಕಾರಿ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರಿಗೆ ಅಭಿನಂದಿಸಿದರು. ಈ ಪ್ರದೇಶದಲ್ಲಿ ಉದ್ದೇಶಿತ ಗ್ರಾನೈಟ್ ಕ್ವಾರಿ ಮಾಡುತ್ತಿರುವ ಬಗ್ಗೆ ಮಾಹಿತಿಯು ಇಂದು ತಿಳಿದಿರುತ್ತದೆ. ಈಗಾಗಲೆ ಸದರಿ ಪ್ರದೇಶದಲ್ಲಿ ಗ್ರಾನೈಟ್ ಕ್ವಾರಿ ಕಾರ್ಯಚಟುವಟಿಕೆ ನಡೆದಿರುತ್ತದೆ. ಇದರಿಂದ ಪರಿಸರ, ಮಣ್ಣು ಗಿಡಗಳು ನಾಶವಾಗಿರುತ್ತದೆ. ಸದರಿ ಉದ್ದೇಶಿತ ಯೋಜನೆಯಿಂದ ನಮಗೆ ಯಾವುದೇ ರೀತಿಯ ಅನುಕೂಲಕ್ಕಿಂತ ತೊಂದರೆಯೆ ಹೆಚ್ಚಾಗುತ್ತದೆ. ಉದ್ದೇಶಿತ ಪ್ರದೇಶದ ಸುತ್ತಮುತ್ತ ರೈತರ ಜಮೀನುಗಳಿದ್ದು, ರೈತರು ಈ ಪ್ರದೇಶದಲ್ಲಿ ಬೆಳೆ ಬೆಳೆಯಲು ಕಷ್ಟವಾಗುತ್ತದೆ. ಈ ಗ್ರಾಮದ ರಸ್ತೆಗಳು 75 ವರ್ಷಗಳಿಂದ ನಿರ್ಮಾಣ ಮಾಡಿರುವುದಿಲ್ಲ. ಇತ್ತೀಚೆಗೆ ರಸ್ತೆಗಳ ಕಾಮಗಾರಿ ನಡೆದಿರುತ್ತದೆ. ಆದರೆ ವರ್ಷದಲ್ಲಿ ಎರಡು ಭಾರಿ ರಸ್ತೆ ನಿರ್ಮಾಣಗೊಂಡಿದ್ದು, ಹೆಚ್ಚುವರಿಯಾಗಿ ಸರಕುಗಳು ಒಳಗೊಂಡ ತೂಕಗಳ ವಾಹನಗಳ ಸಂಚರಣೆಯಿಂದ ರಸ್ತೆಯು ಹಾಳಾಗಿರುತ್ತದೆ. ಸದರಿ ಉದ್ದೇಶಿತ ಯೋಜನೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತದೆ. ಈ ಪ್ರದೇಶದಲ್ಲಿ ಡಿ.ಕೊತ್ತಪಲ್ಲಿಯವರು ಕಲ್ಲು ಹೊಡೆಯುವವರು ಹೆಚ್ಚಾಗಿದ್ದು, ಅವರಿಗೂ ಸಹ ತೊಂದರೆಯಾಗಬಹುದೆಂದು ನಮ್ಮ ಅನಿಸಿಕೆಯಾಗಿರುತ್ತದೆ. ಸದರಿ ಉದ್ದೇಶಿತ ಯೋಜನೆದಾರರಿಗೆ ಲೀಸ್ ನೀಡಲಾಗಿದ್ದು, ಈ ಪ್ರದೇಶದಲ್ಲಿರುವವರು ಕಲ್ಲು ಹೊಡೆಯುವ ವೃತ್ತಿಯವರು ಹೆಚ್ಚಾಗಿದ್ದು, ಸದರಿಯವರಿಗೆ ಕಲ್ಲು ಹೊಡೆಯಲು ಆಕ್ಷೇಪಣೆಯನ್ನು ವ್ಯಕ್ತಪಡಿಸಿದಾಗ ಇವರ ಮುಂದಿನ ಜೀವನಾಂಶಕ್ಕೆ ತೊಂದರೆಯಾಗುತ್ತದೆ. ಈ ಕಾರಣದಿಂದ ಕಲ್ಲು ಹೊಡೆಯುವವರಿಗೆ ಸ್ವಲ್ಪ ಜಮೀನನ್ನು ಕಾಯ್ದಿರಿಸಬೇಕು ಎಂದು ಕೋರಿದರು. ಕಲ್ಲು ಹೊಡೆಯುವವರಿಗೆ ಮೇಲ್ಭಾಗದ ಪ್ರದೇಶವನ್ನು ನೀಡಿ ಉದ್ದೇಶಿತ ಯೋಜನೆದಾರರು ಕೆಳಭಾಗದಲ್ಲಿ ಉದ್ದೇಶಿತ ಯೋಜನೆಯನ್ನು ಕೈಗೊಂಡಾಗ ಕಲ್ಲು ಹೊಡೆಯುವವರು ಮೇಲ್ಭಾಗದಿಂದ ಕೆಳಭಾಗಕ್ಕೆ ಕಲ್ಲನ್ನು ಸಾಗಿಸುವುದು ಕಷ್ಟಕರವಾಗಿರುತ್ತದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ರಸ್ತೆಗಳಿಗೆ ತೊಂದರೆಯಾಗದಂತೆ ಕ್ರಮವಹಿಸಬೇಕೆಂದು ಮಾನ್ಯರಲ್ಲಿ ಕೋರಿದರು.

2. **ಶ್ರೀ. ವಿಜಯರೆಡ್ಡಿ, ಪರಿಸರವಾದಿ, ಬಳ್ಳಾರಿ:**

ಉದ್ದೇಶಿತ ಯೋಜನೆಯಿಂದ ಜನರಿಗೆ ಲಾಭ ಹಾಗೂ ನಷ್ಟಗಳು ಎರಡು ಉಂಟಾಗುವ ಸಂಭವವಿರುತ್ತದೆ. ನಷ್ಟಕ್ಕಿಂತ ಲಾಭವೇ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು. ನಾವು ಈ ಭಾಗದಲ್ಲಿ ಹೆಚ್ಚು ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಸದರಿ ಯೋಜನೆಯಿಂದ ಹಳ್ಳಿಗಳಿಗೆ ಮತ್ತು ರಸ್ತೆಗಳು ಕಾಮಗಾರಿಗಳಿಂದ ಅಭಿವೃದ್ಧಿಯಾಗುತ್ತದೆ. ಅದೇ ರೀತಿ ಅನಾನುಕೂಲಗಳು ಸಹ ಆಗುತ್ತದೆ ಎಂದು ತಿಳಿಸಿದರು. ಈಗಾಗಲೆ ಪ್ರಸ್ಥಾವಿತ ಯೋಜನೆಯಿಂದ ಉಂಟಾಗುವ

ಸಮಸ್ಯೆಗಳನ್ನು ಹೇಗೆ ನಿವಾರಣೆ ಮಾಡುತ್ತಾರೆ ಎಂಬುವ ಮಾಹಿತಿಯನ್ನು ಶ್ರೀ ಅಶ್ವಥ್ ನಾರಾಯಣರವರು ತಿಳಿಸಿರುತ್ತಾರೆ. ಉದ್ದೇಶಿತ ಯೋಜನೆದಾರರು 1500 ಗಿಡಗಳನ್ನು ನೆಡುತ್ತಾರೆ ಎಂದು ಪ್ರಸ್ತಾಪಿಸಿರುತ್ತಾರೆ. ಗಿಡಗಳನ್ನು ನೆಡುವುದರಿಂದ ಧೂಳನ್ನು ಶಮನಗೊಳಿಸಬಹುದು. ಸದರಿ ಉದ್ದೇಶಿತ ಯೋಜನೆದಾರರು 70.0 ಲಕ್ಷಗಳನ್ನು ಯೋಜನೆಗೆಂದು ವ್ಯಯಿಸುತ್ತಿದ್ದು, ಸದರಿಯವರು ಸಿ.ಎಸ್.ಆರ್. ಯೋಜನೆಯಡಿಯಲ್ಲಿ 70.0 ಲಕ್ಷಗಳಲ್ಲಿ ಶೇ 2% ಹಣಕಾಸು ಮೀಸಲಿಟ್ಟು ಗ್ರಾಮಗಳ ಅಭಿವೃದ್ಧಿಗಾಗಿ ಉಪಯೋಗಿಸಬೇಕಾಗುತ್ತದೆ. ತದನಂತರ ಡಿ.ಎಮ್.ಎ (ಜಿಲ್ಲಾ ಖನಿಜ ನಿಧಿ) ಎಂಬ ನಿಧಿಯಿದ್ದು, ಈ ನಿಧಿಯು ಮಾನ್ಯ ಜಿಲ್ಲಾಧಿಕಾರಿಗಳಿಂದ ಗ್ರಾಮಗಳ ಅಭಿವೃದ್ಧಿಗೆ ಬಿಡುಗಡೆ ಮಾಡುತ್ತಾರೆ. ಉದ್ದೇಶಿತ ಯೋಜನೆಗೆ 20 ಜನರ ತಾಂತ್ರಿಕ ಉದ್ಯೋಗವನ್ನು ಸೃಷ್ಟಿಸಲಾಗಿದ್ದು, ಸರ್ಕಾರಿ ಆದೇಶದನ್ವಯ ಶೇ 75 ರಷ್ಟು ಉದ್ಯೋಗವನ್ನು ಸ್ಥಳೀಯರಿಗೆ ನೀಡಬೇಕಾಗಿರುತ್ತದೆ. ಪರೋಕ್ಷವಾಗಿ 100 ಜನಕ್ಕೆ ವಿವಿಧ ರೀತಿಯಲ್ಲಿ ಉದ್ಯೋಗ ಲಭಿಸುತ್ತದೆ ಎಂದು ತಿಳಿಸಿದರು. ಭಾರಿ ತೂಕದ ವಾಹನಗಳು ರಸ್ತೆಯಲ್ಲಿ ಸಂಚರಣೆಯಿಂದ ರಸ್ತೆಗಳು ಹಾಳಾಗುತ್ತವೆ. ಸದರಿ ರಸ್ತೆಗಳನ್ನು ಯೋಜನೆದಾರರು ನಿರ್ಮಾಣ ಮಾಡಬೇಕಾಗಿರುತ್ತದೆ. ಯೋಜನೆದಾರರು ಉದ್ದೇಶಿತ ಪ್ರದೇಶದ ಸುತ್ತ ಮುತ್ತ ಗಿಡಗಳನ್ನು ನೆಟ್ಟು ಭಫರ್ ಜೋನ್ ನಿರ್ಮಾಣ ಮಾಡಬೇಕಾಗಿರುತ್ತದೆ ಮತ್ತು ರಸ್ತೆಗಳ ಇಕ್ಕೆಲಗಳಲ್ಲಿಯೂ ಸಹ ಗಿಡಗಳನ್ನು ನೆಡಬೇಕಾಗುತ್ತದೆ. ಸುತ್ತಮುತ್ತ ಗ್ರಾಮಗಳಿಗೆ ಆರೋಗ್ಯ ಶಿಬಿರ ಮತ್ತು ಶಾಲೆಗಳ ಅಭಿವೃದ್ಧಿ ಕೈಗೊಳ್ಳುತ್ತೇವೆ ಎಂದು ಯೋಜನೆದಾರರು ತಿಳಿಸಿರುತ್ತಾರೆ. ಸದರಿ ಯೋಜನೆಯಿಂದ ಯಾವುದೇ ರೀತಿಯ ಸಮಸ್ಯೆಗಳು ಉದ್ಭವವಾದಲ್ಲಿ ಗ್ರಾಮದ ಅಧ್ಯಕ್ಷರು ಮತ್ತು ಯೋಜನೆದಾರರು ಸಭೆಯನ್ನು ನಡೆಸಿ ಪರಿಹರಿಸಿಕೊಳ್ಳಬೇಕು ಎಂದು ತಿಳಿಸುತ್ತಾ, ಸದರಿ ಪ್ರಸ್ಥಾಪಿತ ಯೋಜನೆಗೆ ತಮ್ಮ ಸಂಪೂರ್ಣ ಬೆಂಬಲವಿರುವುದಾಗಿ ತಿಳಿಸಿ ಮನವಿಯನ್ನು ಸಭೆಯಲ್ಲಿ ಸಲ್ಲಿಸಿದರು.

3. **ಶ್ರೀ. ನವೀನ್, ಪರಿಸರವಾದಿ, ಪಾವಗಡ (ತಾ), ತುಮಕೂರು ಜಿಲ್ಲೆ.**

ಉದ್ದೇಶಿತ ಯೋಜನೆ ಸ್ಥಾಪನೆಗೊಳ್ಳುವುದರಿಂದ ಸ್ಥಳೀಯರಿಗೆ ವಿವಿಧ ರೀತಿಯಲ್ಲಿ ಉದ್ಯೋಗ ದೊರಕುತ್ತದೆ. ಸದರಿ ಯೋಜನೆ ಸ್ಥಾಪಿಸಲು ಸ್ಥಳೀಯರ ಸಹಕಾರ ಅವಶ್ಯಕವಾಗಿರುತ್ತದೆ ಹಾಗೂ ಯೋಜನೆಗೆ ಸಂಪೂರ್ಣ ಬೆಂಬಲವಿರುವುದಾಗಿ ತಿಳಿಸಿ ಮನವಿಯನ್ನು ಸಭೆಯಲ್ಲಿ ಸಲ್ಲಿಸಿದರು.

4. **ಶ್ರೀ. ಗಂಗಪ್ಪ. ಡಿ, ಗೊರ್ತಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ.**

ಸದರಿಯವರು ಮಾತನಾಡಿ ನಾವು ಕಲ್ಲು ಹೊಡೆಯುವ ಕೆಲಸವನ್ನು ಸುಮಾರು 50 ವರ್ಷಗಳಿಂದ ನಿರ್ವಹಿಸಿಕೊಂಡು ಬರುತ್ತಿದ್ದೇವೆ. ನಮಗೆ ಅನುಕೂಲ ಮಾಡಿಕೊಡುವಂತಿದ್ದರೆ ನಮಗೆ ಯಾವುದೇ ಅಂಭ್ಯತರವಿರುವುದಿಲ್ಲ. ಆದರೆ ಈ ಸ್ಥಳದಲ್ಲಿ ನಾವು ಕಲ್ಲು ಹೊಡೆಯುತ್ತಿದ್ದು, ಗ್ರಾನೈಟ್ ಯೋಜನೆಯನ್ನು ಸ್ಥಾಪಿಸುವುದರಿಂದ ನಮಗೆ ಯಾವುದೇ ಅಡ್ಡಿಮಾಡಬಾರದೆಂದು ತಿಳಿಸಿದರು.

5. **ಶ್ರೀ. ದೇವರಾಜು, ಯಲಹಂಕ, ಬೆಂಗಳೂರು:**

ಸದರಿಯವರು ಮಾತನಾಡಿ, ಸದರಿ ಯೋಜನೆಯನ್ನು ಸ್ಥಾಪಿಸಬೇಕಾದರೆ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿರಬೇಕು. ಸ್ಥಳೀಯರಿಗೆ ಮತ್ತು ಯೋಜನೆದಾರರಿಗೆ ಅನುಕೂಲವಾಗಬೇಕು. ಸದರಿ ಯೋಜನೆಗೆ ಬೆಂಬಲವಿರುವುದಾಗಿ ತಿಳಿಸಿದರು ಹಾಗೂ ಮನವಿಯನ್ನು ಸಭೆಯಲ್ಲಿ ಸಲ್ಲಿಸಿದರು.

6. **ಶ್ರೀ. ಹಜರತ್‌ಯ್ಯ, ನಲ್ಲೂರು :**

ಉದ್ದೇಶಿತ ಯೋಜನೆಯನ್ನು ಬೆಂಬಲಿಸುವುದೊಂದಿಗೆ ಮನವಿಯನ್ನು ಸಭೆಯಲ್ಲಿ ಸಲ್ಲಿಸಿದರು.

7. **ಶ್ರೀ. ಆದಿನಾರಾಯಣ, ಸಜ್ಜುಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ:**

ಗ್ರಾನೈಟ್ ಕ್ವಾರಿ ಮಾಡುವುದರಿಂದ ನಿಮಗೆ ಅನುಕೂಲವಾಗುತ್ತದೆಯೇ ಹೊರತು ನಮಗೆ ಯಾವುದೇ ರೀತಿಯ ಅನುಕೂಲವಿರುವುದಿಲ್ಲ. ಸದರಿ ಯೋಜನೆಯ ಪ್ರದೇಶದ ಸರ್ವೇ ನಂ. 77ರಲ್ಲಿ ನಮ್ಮ ಜಮೀನುಗಳು ಸಹ ಇರುತ್ತದೆ. ಆದರೆ ನಮ್ಮ ಜಮೀನುಗಳಲ್ಲಿ ಸಂಪರ್ಕ ರಸ್ತೆಯನ್ನು ಕಲ್ಪಿಸಿಕೊಂಡು ಸಂಚರಿಸುತ್ತಿರುತ್ತೀರಿ. ಆದರೆ ನಾವು ನಿಮಗೆ ಆಕ್ಷೇಪಣೆಯನ್ನು ಮಾಡುತ್ತಿರುವುದಿಲ್ಲವೆಂದು ತಾವುಗಳು ನಮ್ಮ ಗ್ರಾಮಗಳನ್ನು ಅಭಿವೃದ್ಧಿಗೊಳಿಸಿದಲ್ಲಿ ಮಾತ್ರ ಸದರಿ ಯೋಜನೆಯನ್ನು ಪ್ರಾರಂಭಿಸಿ ಇಲ್ಲವಾದಲ್ಲಿ ಯೋಜನೆಯನ್ನು ಪ್ರಾರಂಭಿಸಬಾರದು ಎಂದು ತಿಳಿಸಿದರು. ಈ ಗ್ರಾಮದಲ್ಲಿ ದೇವಸ್ಥಾನವಿರುವುದಿಲ್ಲ, ದೇವಸ್ಥಾನವನ್ನು ನಿರ್ಮಿಸುವಂತೆ ತಿಳಿಸಿದರು. ಇಲ್ಲವಾದಲ್ಲಿ ನಾನೇ ದೂರನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು

8. **ಶ್ರೀ. ಕೃಷ್ಣಪ್ಪ, ಗೊರ್ತಪಲ್ಲಿ ಗ್ರಾಮ, ಬಾಗೇಪಲ್ಲಿ (ತಾ), ಚಿಕ್ಕಬಳ್ಳಾಪುರ ಜಿಲ್ಲೆ:**

ಸದರಿಯವರು ಮಾತನಾಡಿ, ಗಣಿಗಾರಿಕೆ ಮಾಡುವ ಪ್ರದೇಶದ 1 ಕಿ.ಮೀ ಅಂತರದಲ್ಲಿ ಯಾವುದೇ ಶಾಲೆಗಳಿಲ್ಲ ಎಂದು ತಿಳಿಸಿರುತ್ತಾರೆ. ಸಜ್ಜುಪಲ್ಲಿ, ಡಿ. ಗೊರ್ತಪಲ್ಲಿ ಮತ್ತು ದೊಡ್ಡಕೊಂಡ ಗ್ರಾಮವು 1. ಕಿ.ಮೀ ಗಿಂತ ಕಡಿಮೆ ಅಂತರವಿದ್ದು, ಸದರಿ ಗ್ರಾಮಗಳಲ್ಲಿ ಶಾಲೆಗಳು ಇರುತ್ತವೆ ಎಂದು ತಿಳಿಸಿದರು. ಉದ್ಯೋಗ ಅವಕಾಶ ಒದಗಿಸಿಕೊಡುತ್ತೇವೆ ಎಂದು ಯೋಜನೆದಾರರು ತಿಳಿಸಿರುತ್ತಾರೆ. ಸದರಿ ಯೋಜನೆಯಿಂದ ಉದ್ಯೋಗಗಳನ್ನು ನೀಡುವುದರಿಂದ ಈ ಭಾಗದ ನಿರುದ್ಯೋಗ ಯುವಕರಿಗೆ ಅನುಕೂಲವಾಗುತ್ತದೆ ಮತ್ತು ಸಂತೋಷಕರ ಸಂಗತಿ. ನಮ್ಮ ಗ್ರಾಮಸ್ಥರು ಸುಮಾರು 25 ವರ್ಷಗಳಿಂದ ಕಲ್ಲು ಹೊಡೆಯುವ ಕಾರ್ಯವನ್ನು ನಡೆಸುತ್ತಿದ್ದು, ಎಷ್ಟು ಜನರಿಗೆ ತಾವು ಉದ್ಯೋಗಾವಕಾಶ ನೀಡಿರುತ್ತೀರಿ ಎಂದು ಪ್ರಶ್ನಿಸಿದರು. ನಮ್ಮ ತಾಲ್ಲೂಕಿನವರಾಗಲಿ ಮತ್ತು ಜಿಲ್ಲೆಯವರಾಗಲಿ ಪರಿಸರವಾದಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಲ್ಲಿ ನಮಗೆ

ಸಂತೋಷವಾಗುತ್ತಿತ್ತು ಆದರೆ ನೆಲ್ಲೂರು ಮತ್ತು ಬಳ್ಳಾರಿ ಈ ಭಾಗದಿಂದ ಆಗಮಿಸಿ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಸದರಿಯವರಿಗೆ ಮತ್ತು ನಮಗೆ ಯಾವುದಾದರು ಸಂಬಂಧವಿದೆಯೇ ? ಎಂದು ಪ್ರಶ್ನಿಸಿದರು. ಸದರಿ ಯೋಜನೆದಾರರು ಉಪಾಯದಿಂದ ಉದ್ದೇಶಿತ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಲು ಸದರಿಯವರನ್ನು ಆಹ್ವಾನಿಸಿರುತ್ತಾರೆ. ಲಾರಿಗಳ ಚಾಲನೆಯಿಂದ ರಸ್ತೆಗಳು ತುಂಬಾ ಹಾಳಾಗಿರುವುದರಿಂದ ನಮಗೆ ಬಹಳಷ್ಟು ರಸ್ತೆಗಳಿಂದ ತೊಂದರೆಗಳಾಗುತ್ತಿದೆ. ಸಸಿಗಳನ್ನು ನೆಡುತ್ತೇವೆ ಎಂದು ತಿಳಿಸಲಾಗಿದ್ದು, ಆದರೆ ಈ ಭಾಗದಲ್ಲಿ ಸುಮಾರು 25 ವರ್ಷಗಳಿಂದ ಗಣಿಗಾರಿಕೆ ಕಾರ್ಯವನ್ನು ಹೊರತು ಪಡಿಸಿ ಸಸಿಗಳನ್ನು ಯಾರೂ ಸಹ ನೆಟ್ಟಿರುವುದಿಲ್ಲವೆಂದು ತಿಳಿಸಿದರು. ನಾವುಗಳು ಎಫ್.ಇ. ಸಂಸ್ಥೆ, ಪಂಚಾಯ್ತಿ ವತಿಯಿಂದ ಮತ್ತು ನರೇಗಾ ಅಡಿಯಲ್ಲಿ ಬೆಟ್ಟ ಗುಡ್ಡಗಳಲ್ಲಿ ಗಿಡಗಳನ್ನು ನೆಡಲಾಗಿರುತ್ತದೆ. ಆರೋಗ್ಯ ಶಿಬಿರದ ಸಂದರ್ಭದಲ್ಲಿ ಯಾವುದೇ ಹೆಚ್ಚಿನ ತರಬೇತಿ ಹೊಂದಿರುವ ವೈದ್ಯರು ಬರುವುದಿಲ್ಲ ಮತ್ತು ಯಾವುದೇ ಪ್ರಯೋಜನವಿಲ್ಲ ಎಂದರು. ಗಣಿಗಾರಿಕೆಯಿಂದ ಸರ್ಕಾರಕ್ಕೆ ಲಾಭವಿರಬಹುದೇ ಹೊರತು ಇಲ್ಲಿನ ಗ್ರಾಮಸ್ಥರಿಗೆ ಯಾವುದೇ ಅನುಕೂಲವಿಲ್ಲ ಹಾಗೂ ಸದರಿ ಉದ್ದೇಶಿತ ಯೋಜನೆಯಿಂದ ತೊಂದರೆಗಳು ಉಂಟಾಗುತ್ತದೆ ಎಂದು ಅಭಿಪ್ರಾಯ ತಿಳಿಸಿದರು.

ಸದರಿ ಯೋಜನೆಯ ಬಗ್ಗೆ ಯೋಜನೆಯ ಮಾಲೀಕರಾದ ಶ್ರೀ. ಇಕ್ಬಾಲ್ ಹುಸೇನ್ ರವರು ಮಾತನಾಡಿ, ಯೋಜನೆಯ ಬಗ್ಗೆ ಇಲ್ಲಿನ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಹಾಗೂ ಅನಿಸಿಕೆಗಳನ್ನು ತಿಳಿಸಲಾಗಿದ್ದು, ಕೆಲವರು ಪರವಾಗಿ ಹಾಗೂ ಇನ್ನು ಕೆಲವರು ವಿರೋಧವಾಗಿ ಮಾತನಾಡಿರುತ್ತಾರೆ. ಇದರಿಂದ ಪರಿಸರದ ಮೇಲೆ ಹಾಗೂ ತಮ್ಮ ಗ್ರಾಮಗಳ ಮೇಲೆ ತಮಗೆ ಇರುವ ಕಾಳಜಿ ಎದ್ದು ಕಾಣುತ್ತಿದೆ. ನಾವೆಲ್ಲಾ ಒಂದಾಗಿ ಉದ್ಯೋಗವನ್ನು ಸೃಷ್ಟಿ ಮಾಡಬೇಕಾಗುತ್ತದೆ. ಈಗಾಗಲೆ ಈ ಪ್ರದೇಶದಲ್ಲಿ 15 ವರ್ಷದಿಂದ ಗ್ರಾನೈಟ್ ಕಾರ್ಯವು ನಡೆಯುತ್ತಿದ್ದು, ಸದರಿ ಕಾರ್ಯವನ್ನು ನೀವು ಅಥವಾ ಬೇರೆ ಉದ್ದಿಮೆದಾರರು ಮಾಡುತ್ತಾ ಬಂದಿರುತ್ತಾರೆ. ಈ ಮೊದಲು ಸದರಿ ಪ್ರದೇಶವನ್ನು ಕಟ್ಟಡ ಕಲ್ಲು ಗಣಿಗಾರಿಕೆಯನ್ನು ನಡೆಸುತ್ತಿದ್ದು, ಸ್ಫೋಟದ ಕಾರ್ಯ ಚಟುವಟಿಕೆಯನ್ನು ಸಹ ನಡೆಸುತ್ತಿರುತ್ತಾರೆ. ಕೆಲವರು ಕಳ್ಳತನವಾಗಿಯೂ ಸಹ ಸದರಿ ಕಾರ್ಯ ಚಟುವಟಿಕೆಯನ್ನು ನಡೆಸುತ್ತಿರುವುದು ತಿಳಿದು ಬಂದಿರುತ್ತದೆ. ಈ ಮೊದಲು ನಡೆಸುತ್ತಿದ್ದ ಮಾಲೀಕರು ಸರ್ಕಾರಕ್ಕೆ ರೂ. 1.5 ಕೋಟಿ ರಾಯಲ್ಟಿ ಹಣವನ್ನು ಪಾವತಿಸಬೇಕಾಗಿತ್ತು. ನಂತರ ಉದ್ದಿಮೆದಾರರು ಸದರಿ ಉದ್ದಿಮೆಯನ್ನು ನನಗೆ ಮಾರಟ ಮಾಡಲಾಗಿ ರೂ. 1.5 ಕೋಟಿ ರಾಯಲ್ಟಿ ಹಣವನ್ನು ಸರ್ಕಾರಕ್ಕೆ ಪಾವತಿಸಿರುತ್ತೇನೆ. ತದನಂತರ ನಾವು ಉದ್ದೇಶಿತ ಪ್ರದೇಶಕ್ಕೆ ಆಗಮಿಸಿ ಗಮನಿಸಿದಾಗ ಉದ್ದೇಶಿತ ಯೋಜನೆಯು ಕಟ್ಟಡ ಕಲ್ಲು ಗಣಿಗಾರಿಕೆ ಚಟುವಟಿಕೆ ನಡೆಸಲು ಸಾಧ್ಯವಾಗುವುದಿಲ್ಲವೆಂದು ಮನಗಂಡು ಈ ಪ್ರದೇಶವು ಅಲಂಕಾರಿಕೆ ಶಿಲೆ ಚಟುವಟಿಕೆಯನ್ನು ನಡೆಸಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತೇನೆ ಎಂದು ತಿಳಿಸಿದರು. ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ಅರ್ಜಿಯನ್ನು ಸಲ್ಲಿಸಲು ಅವಕಾಶವಿದೆ ಎಂದು ತಿಳಿದು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಉದ್ದಿಮೆದಾರರು ತಾವುಗಳು ಸದರಿ ಉದ್ದೇಶಿತ ಯೋಜನೆಗೆ ಅವಕಾಶ ಮಾಡಿಕೊಡಬೇಕೆಂದು ಗ್ರಾಮದ ಸಾರ್ವಜನಿಕರಲ್ಲಿ

ವಿನಂತಿಸಿದರು. ಈ ಯೋಜನೆಯಿಂದ ತಮ್ಮ ಗ್ರಾಮಗಳಿಗೆ, ಶಾಲೆಗಳಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಸದರಿ ಕಾರ್ಯಚಟುವಟಿಕೆಯನ್ನು ನಡೆಸುತ್ತೇವೆ ಎಂದು ತಿಳಿಸಿದರು.

ಸಾರ್ವಜನಿಕ ಸಭೆ ನಡೆಯುವ ಸಂದರ್ಭದಲ್ಲಿ ಸಾರ್ವಜನಿಕರು 04 ಮನವಿಗಳನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು ಮತ್ತು ಮಾನ್ಯ ಶಾಸಕರು, ಬಾಗೇಪಲ್ಲಿ ತಾಲ್ಲೂಕು ಇವರು ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಗೆ 02 ಮನವಿ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸಲ್ಲಿಸಿದ ಮನವಿ ಪತ್ರಗಳನ್ನು ಪಟ್ಟಿ ಮಾಡಲಾಗಿ **ಅನುಬಂಧ –04** ರಲ್ಲಿ ಲಗತ್ತಿಸಿದೆ.

ಸಾರ್ವಜನಿಕ ಸಭೆಯ ಅಂತಿಮದಲ್ಲಿ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದವರನ್ನು ಉದ್ದೇಶಿಸಿ ಸಭೆಯಲ್ಲಿ ಸಲ್ಲಿಸಿರುವ ಅಹವಾಲುಗಳು, ಅಭಿಪ್ರಾಯಗಳು, ಕುಂದು ಕೊರತೆಗಳನ್ನು, ಆಕ್ಷೇಪಣೆಗಳನ್ನು ಹಾಗೂ ದಾಖಲೆಗಳನ್ನು ಪರಿಗಣಿಸಿ ನಡವಳಿಯನ್ನು ತಯಾರಿಸಿ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (SEIAA) ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು.

ಸದರಿ ಸಾರ್ವಜನಿಕ ಸಭೆಯು ಸುಗಮವಾಗಿ ನಡೆಯಲು ಅವಕಾಶ ಮಾಡಿಕೊಟ್ಟ ಎಲ್ಲರಿಗೂ ಧನ್ಯವಾದಗಳನ್ನು ಪರಿಸರ ಅಧಿಕಾರಿಗಳು ತಿಳಿಸುತ್ತಾ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ಮಧ್ಯಾಹ್ನ ಸುಮಾರು 1.00 ಗಂಟೆಗೆ ಮುಕ್ತಾಯಗೊಳಿಸಲಾಯಿತು. ಸಾರ್ವಜನಿಕ ಸಭೆಯ ಛಾಯ ಚಿತ್ರಗಳು ಮತ್ತು ವೀಡಿಯೋಗ್ರಾಫ್‌ಗಳನ್ನು **ಅನುಬಂಧ – 05** ರಲ್ಲಿ ಲಗತ್ತಿಸಿದೆ.

**ಶ್ರೀ. ಹೆಚ್. ಅಮರೇಶ್,**
**ಅಪರ ಜಿಲ್ಲಾಧಿಕಾರಿಗಳು ಹಾಗೂ**
**ಪರಿಸರ ಸಾರ್ವಜನಿಕ ಸಭೆಯ ಅಧ್ಯಕ್ಷರು**